# ಸಿನಿಮಾ ಲೈಫು ಫೇಮು ಫಿಲಾಸಫಿ ಇತ್ಯಾದಿ

**‘ಒಂದು ಮೊಟ್ಟೆಯ ಕಥೆ’ ಸಿನಿಮಾದ ಮೂಲಕ ಪರಿಚಿತರಾಗಿ ನಂತರ ಹಲವು ಸಿನಿಮಾಗಳಲ್ಲಿ ನಟಿಸಿದರೂ ರಾಜ್ ಬಿ. ಶೆಟ್ಟಿ ಇಂದಿಗೂ ‘ಮೊಟ್ಟೆ ಶೆಟ್ರು’ ಆಗಿಯೇ ಆಪ್ತರು. ಸಿನಿಮಾ ಮಾಧ್ಯಮವನ್ನು ತುಂಬ ಗಂಭೀರವಾಗಿ ಪರಿಗಣಿಸಿರುವ ಕನ್ನಡ ಚಿತ್ರರಂಗದ ವಿರಳಾತಿವಿರಳ ನಿರ್ದೇಶಕರಲ್ಲಿ ಒಬ್ಬರಾದ ಅವರು, ಅಭಿಮಾನಿಗಳ ಮನಸ್ಸಿನಲ್ಲಿ ಮೂಡಿದ ತಮ್ಮದೇ ವಿಗ್ರಹವನ್ನು ಭಂಜಿಸಲು ಹಿಂಜರಿಯದವರು. ‘ಜನರ ಕಣ್ಣಲ್ಲಿ ಬೆಳೆಯಬೇಕು ಎಂಬ ವ್ಯಾಮೋಹಕ್ಕೆ ಒಳಗಾಗಿ ನನ್ನ ಸ್ವಾತಂತ್ರ್ಯವನ್ನು ಅವರ ಕೈಯಲ್ಲಿ ಕೊಡಲಾರೆ’ ಎಂದು ದಿಟ್ಟವಾಗಿ ನುಡಿಯುವ ರಾಜ್ ಜೊತೆಗಿನ ಈ ಮಾತುಕತೆ ಅವರ ಸಂವೇದನೆಯ ಹಲವು ಕವಲುಗಳನ್ನು ಪರಿಚಯಿಸುವಂತಿದೆ.**

ಹೋಲಿಸುತ್ತಿರುತ್ತೇನೆ. ಅಡುಗೆ ಪ್ರಕ್ರಿಯೆಯಲ್ಲಿ ಯಾವುದು ಹೆಚ್ಚು ಶ್ರೇಷ್ಠವಾದದ್ದು ಎಂದರೆ ಆ ಪ್ರಶ್ನೆಯೇ ಅಡುಗೆಗೆ ಅನ್ವಯ ಆಗುವುದಿಲ್ಲ. ಯಾಕೆಂದರೆ ತರಕಾರಿ ಕತ್ತರಿಸಿ ಸ್ವಚ್ಛಮಾಡುವುದು, ಅದನ್ನು ಪಕ್ವವಾಗಿ ಬೇಯಿಸುವುದು, ಉಪ್ಪು ಹಾಕುವುದರಿಂದ ಹಿಡಿದು ಆಮೇಲೆ ಸರಿಯಾದ ಬಿಸಿಯಲ್ಲಿ ಅದನ್ನು ಬಡಿಸುವುದರವರೆಗೂ ಎಲ್ಲವೂ ಮುಖ್ಯವೇ. ಹೀಗಾಗಿ ನನಗೆ ಸಿನಿಮಾ ಮಾಡುವ ಪ್ರಕ್ರಿಯೆಯಲ್ಲಿ ಯಾವುದು ಇಷ್ಟ ಎಂದು ಕೇಳಿದರೆ ಇಡೀ ಪ್ರಕ್ರಿಯೆಯೇ ಇಷ್ಟ ಎನ್ನುತ್ತೇನೆ. ಸಿನಿಮಾ ರೆಡಿಯಾಗಿ ಚಿತ್ರಮಂದಿರಕ್ಕೆ ಹೋಗಿ ಜನರಿಂದ ಸಿಗುವ ಪ್ರತಿಸ್ಪಂದನ ಕೊಡುವ ಖುಷಿ ಕೇವಲ ಶೇ. 1. ಉಳಿದ ಖುಷಿಯನ್ನೆಲ್ಲ ನಾನು ಅನುಭವಿಸುವುದು ಸಿನಿಮಾ ಮಾಡುವಾಗಲೇ.

ನಿಮ್ಮ ಮನಸಲ್ಲಿದ್ದ ಸಿನಿಮಾವನ್ನು ಕಾಗದದ ಮೇಲೆ ಹಾಕಿ, ಅದಕ್ಕೊಂದು ಬಣ್ಣ ರೂಪುರೇಷೆ ಬಂದು, ಅದೇ ಬಣ್ಣವನ್ನು ಅದಕ್ಕಿಂತ ಭಿನ್ನವಾದ ಬಣ್ಣಗಳನ್ನು ಕಲಾವಿದರು ನೀಡಿ, ಆಮೇಲೆ ಅದನ್ನು ನೋಡಿದಾಗ ನಿಮ್ಮನ್ನೇ ಅದು ಅಚ್ಚರಿಗೊಳಿಸುತ್ತದಲ್ಲ... ಆ ಇಡೀ ಪ್ರಕ್ರಿಯೆಯಲ್ಲಿ ನೀರಸ ಎನ್ನುವುದು ಎಲ್ಲಿಯೂ ಇರುವುದಿಲ್ಲ. ನನಗೆ ಕುವೆಂಪು ಅವರ ಒಂದು ಮಾತು ತುಂಬ ಇಷ್ಟ. ‘ಸೃಷ್ಟಿಕಾರ್ಯವಲ್ಲದ ಸರ್ವಕಾರ್ಯವೂ ನೀರಸ’ ಎನ್ನುವ ಮಾತದು. ಸಿನಿಮಾ ಸೃಷ್ಟಿಕಾರ್ಯವಾದ ಕಾರಣ ಇಲ್ಲಿ ನೀರಸವಾದದ್ದು ಅಥವಾ ಅಮುಖ್ಯ ಅನ್ನುವಂಥ ಭಾಗ ಇರುವುದಿಲ್ಲ. ನನಗೆ ನೀರಸ ಅನ್ನಿಸುವಂಥದ್ದು ಸಿನಿಮಾ ಪ್ರಮೋಷನ್. ಆದ್ರೆ ಏನ್ಮಾಡೋದು? ಅದನ್ನು ಮಾಡಲೇಬೇಕು. ಯಾಕೆಂದರೆ ಅದು ಅನಿವಾರ್ಯ.

**◆ ಸಿನಿಮಾ ನಿರ್ದೇಶಕನಾಗಿ, ನಟನಾಗಿ ನಿಮ್ಮದೊಂದು ಇಮೇಜ್ ಜನರ ಮನಸಲ್ಲಿ ರೂಪುಗೊಂಡಿರುತ್ತದೆ. ಮೊದಲಾದರೆ ಸೆಲೆಬ್ರಿಟಿಗಳಿಗೆ ಅವರ ವೈಯಕ್ತಿಕ ಒಲವು ನಿಲುವಿನ ಆಚೆಗೆ ತೆರೆಯ ಮೇಲಿನ ಪಾತ್ರ, ಚಿತ್ರಗಳಿಂದಲೇ ಒಂದು ಗಟ್ಟಿಯಾದ ಇಮೇಜ್ ರೂಪುಗೊಳ್ಳುತ್ತಿತ್ತು. ಆದರೆ ಈಗ ಬೆಳಿಗ್ಗೆ ಒಬ್ಬ ನಟನ ಸಿನಿಮಾ ನೋಡಿ ಮೆಚ್ಚಿಕೊಂಡವನು ಸಂಜೆ ಅವನ ಫೇಸ್‌ಬುಕ್ ಸ್ಟೇಟಸ್ ನೋಡಿ ದ್ವೇಷಿಸಲಾರಂಭಿಸುತ್ತಾನೆ. ಇಂಥ ವೈರುಧ್ಯಗಳನ್ನು ಹೇಗೆ ನೋಡುತ್ತೀರಿ ನೀವು?**

ಕಲಾವಿದನಿಗೆ ಅಭಿಮಾನಿಗಳಷ್ಟು ದೊಡ್ಡ ದೇವರು ಯಾವುದೂ ಇಲ್ಲ; ಅಭಿಮಾನಿಗಳಷ್ಟು ದೊಡ್ಡ ಜೈಲೂ ಯಾವುದೂ ಇಲ್ಲ. ಯಾಕೆಂದರೆ, ಕಲಾವಿದನನ್ನು ಬಿಡೋಣ, ಒಬ್ಬ ಲೀಡರ್ ಎಂದುಕೊಳ್ಳೋಣ. ರಾಜಕೀಯ ಲೀಡರ್ ಇರಬಹುದು; ಆಧ್ಯಾತ್ಮಿಕ ಲೀಡರ್ ಇರಬಹುದು.

ಒಬ್ಬ ಲೀಡರ್ ಒಂದು ಸಲ ತನ್ನ ಅನುಯಾಯಿಗಳಿಗೆ ‘ಮಹಾತ್ಮ’ ಎಂದು ತೋರಿಸಿಕೊಟ್ಟರೆ ಆಮೇಲೆ ಅವನು ಅವನ ಹಿಂಬಾಲಕರ ಕಣ್ಣಲ್ಲಿ ಮಹಾತ್ಮನಾಗಿಯೇ ಇರಬೇಕು. ‘ಅವನು ಮೂರೂವರೆಗೆ ಏಳಬೇಕು. ಹಾಗಿದ್ದರೆ ಮಾತ್ರ ಅವನು ಮಹಾತ್ಮ’ ಎಂಬ ಷರತ್ತನ್ನು ಅವನ ಹಿಂಬಾಲಕರು ಹಾಕಿದರೆ, ಇವನು ಪಾಪ, ತನ್ನ ಮಹಾತ್ಮ ಪಟ್ಟವನ್ನು ಉಳಿಸಿಕೊಳ್ಳಲು ಮೂರೂವರೆಗೇ ಏಳಬೇಕಾಗುತ್ತದೆ; ರಾತ್ರಿ ಒಂದೂವರೆಗೆ ಮಲಗಿದ್ದರೂ! ಲೀಡರ್‌ಗಳು ಅನುಯಾಯಿಗಳನ್ನು ಮುನ್ನಡೆಸುವುದು ಮಾತ್ರವಲ್ಲ; ಎಷ್ಟೋ ಸಲ ಅನುಯಾಯಿಗಳು ಲೀಡರ್‌ಗಳನ್ನು ನಡೆಸುತ್ತಾರೆ. ಜನರ ಕಣ್ಣಲ್ಲಿ ಬೆಳೆಯಬೇಕು ಎಂಬ ಹಂಬಲವಿರುವವನು ಅವರ ಕೈಗೆ ತನ್ನ ಸ್ವಾತಂತ್ರ್ಯವನ್ನು ಕೊಡಲು ಸಿದ್ಧನಾಗಿರಬೇಕು.

ಎಂಥ ದೊಡ್ಡ ನಟನೇ ಇರಲಿ, ಸಾಧಕನೇ



> ನಾವು ಏನಾದರೂ ಕೆಲಸ ಮಾಡುವುದಾದರೆ ಸಂತೃಪ್ತಿಗೋಸ್ಕರ ಮಾಡಬೇಕು. ಅದನ್ನು ಬಿಟ್ಟು ಇದನ್ನು ಹೇಳಿದರೆ ನಾನು ಜನರ ಕಣ್ಣಿನಲ್ಲಿ ದೊಡ್ಡವನಾಗಿ ಕಾಣಿಸಬಹುದಾ? ಜನರ ಕಣ್ಣಿನಲ್ಲಿ ಸಣ್ಣವನಾಗಬಹುದಾ, ಈ ಸಿನಿಮಾವನ್ನು ಮಾಡಿದರೆ ದೊಡ್ಡವನಾಗಿ ಕಾಣಿಸಬಹುದಾ, ಸಣ್ಣವನಾಗಿ ಕಾಣಿಸಬಹುದಾ ಎಂಬುದು ತಲೆಯಲ್ಲಿ ಬಂದರೆ – ಆ ಆಲೋಚನೆ ಬಂದಾಗಲೇ ನೀವು ಸಣ್ಣವರಾಗಿ ಆಗಿದೆ.